ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ.156/2025

| | | | |
|---|---|---|---|
| ಹೆಸರು | : | ಬಿ ಎಸ್ ಬಾಲಕೃಷ್ಣ | ಪಿಡಬ್ಲ್ಯೂ-1 |
| ಗಂಡನ ಹೆಸರು | : | ದಿ. ಸೋಮಯ್ಯ | ಸಿಡಬ್ಲ್ಯೂ-1 |
| ವಯಸ್ಸು | : | 59 ವರ್ಷ | |
| ವೃತ್ತಿ | : | ಅಬಕಾರಿ ಉಪನಿರೀಕ್ಷರು | |
| ವಾಸ ಸ್ಥಳ | : | ಪಿರಿಯಾಪಟ್ಟಣ | |

ದಿಃ09.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ಮಾರ್ಚ್ 2022 ರಿಂದ ಅಕ್ಟೋಬರ್ 2025 ರವರೆಗೆ ಅಬಕಾರಿ ಉಪನೀರಿಕ್ಷಕರು ಆಗಿ ಸೋಮವಾರಪೇಟೆ ಯಲ್ಲಿ ಅಬಕಾರಿ ಇಲಾಖೆ ಯಲ್ಲಿ ಕರ್ತವ್ಯ ನಿವರ್ಹಿಸಿದ್ದೇನೆ.

ಈ ಪ್ರಕರಕ್ಕೆ ಸಂಬಂದಪಟ್ಟಂತೆ ದಿ.10.09.2024 ರಂದು ಚಾಸಾ 5 ರವರು ರಾತ್ರಿ ಪಾಳಿ ಮುಗಿಸಿ ಮನೆಗೆ ಹೋಗುವ ಸಮಯದಲ್ಲಿ ದಾರಿ ಮದ್ಯದಲ್ಲಿ ಚಿಕ್ಕ ಅಬ್ಬೂರು ಗ್ರಾಮದ ನಿವಾಸಿ ಬಂದು ಮೌಖಿಕವಾಗಿ ಚಿಕ್ಕ ಅಬ್ಬೂರು ಗ್ರಾಮದ ನಿವಾಸಿಯಾದ ವಲ್ಲಿ ಡಿಸೋಜ ಎಂಬುವವರು ತಮ್ಮ ಮನೆಯಲ್ಲಿ ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಲು ಬೆಲ್ಲದ ಪುಳಗಂಜಿಯನ್ನು ಶೇಖರಿಸಿ ಕೊಂಡು ಇಟ್ಟುಕೊಂಡಿರುತ್ತಾರೆ ಎಂದು ಮೌಖಿಕವಾಗಿ ದೂರನ್ನು ನೀಡಿರುತ್ತಾರೆ. ಅದರಂತೆ ಚಾಸಾ-5 ರವರು ನನಗೆ ಲಿಖಿತವಾಗಿ ದೂರು ನೀಡಿದ ಮೇರೆಗೆ ಕೂಡಲೇ ಕರ್ಯಪ್ರವೃತ್ತರಾಗಿ ಸದರಿಯವರ ವಿಳಾಸಕ್ಕೆ ಹೋಗಲು ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಸ್ಥಳಕ್ಕೆ ಹೋಗಿ ಪರಿಶೀಲಿಸಲು ಹೋಗುವ ಸಮಯದಲ್ಲಿ ಅದೇ ಗ್ರಾಮದ ನಿವಾಸಿಯಾದ ಇತ್ತಲ ಮುಕ್ಕಿ ಗ್ರಾಮದ ಚಾಸಾ 2 ರವರನ್ನು ನಂತರ ಸದರಿಯವರಿಗೆ ನಾವು ಬಂದ ವಿಚಾರ ತಿಳಿಸಿ ಪಂಚರನ್ನಾಗಿ ಬರಲು ಕೇಳಿಕೊಂಡಾಗ ಒಪ್ಪಿರುತ್ತಾರೆ. ನಂತರ ಪಂಚರೊಂದಿಗೆ ಆ ಮನೆಯ ಹತ್ತಿರ ಹೋದಾಗ ಸದರಿ ಮನೆಯು ಹಂಚಿನ ಮನೆಯಾಗಿದ್ದು ನೀಲಿ ಬಣ್ಣದ್ದಾಗಿರುತ್ತದೆ ನಂತರ ವುನೆಯ ಮುಂಭಾಗದಲ್ಲಿ ಒಬ್ಬ ವ್ಯಕ್ತಿಯು ಕೂತಿದ್ದು ಆತನ ಹೆಸರು ವಲ್ಲಿ ಡಿಸೋಜ ಎಂದು ತಿಳಿಸಿರುತ್ತಾರೆ. ನಂತರ ಅವರಿಗೆ ನಾವು ಬಂದ ವಿಚಾರವನ್ನು ತಿಳಿಸಿ ಶೋಧನ ಸಮುಚಿತ ವಾರೆಂಟ್ ಅನ್ನು ತಯಾರಿಸಿಕೊಂಡು ಮನೆಯ ಒಳಗೆ ಪ್ರವೇಶಿಸಿರುತ್ತೇವೆ.

2. ಸದರಿ ಮನೆಯಲ್ಲಿ 6 ಕೋಣೆಗಳು ಇದ್ದು ಪರಿಶೀಲಿಸಿದಾಗ ಎಡಭಾಗದ ಕೋಣೆ ಸ್ನಾನದ ಮನೆಯ ಕೋಣೆಯಾಗಿದ್ದು ಅದರ ಎಡಭಾಗದಲ್ಲಿ 15 ಲೀಟರ ಸಾಮರ್ಥ್ಯದ ಹಳದಿ ಬಣ್ಣದ ಎರಡು ಪ್ಲಾಸ್ಟಿಕ್ ಬಿಂದಿಗೆಗಳು ಬಟ್ಟೆಯಿಂದ ಸುತ್ತಿದ್ದು ಅವುಗಳನ್ನು ತೆಗೆದು ನೋಡಿದಾಗ ಬೆಲ್ಲದ ಪುಳಗಂಜೆ ಇರುತ್ತದೆ. ಸದರಿ ಬಿಂದಿಗೆಗಳಲ್ಲಿ ತಲಾ 10 ಲೀಟರ್ ನ ಪುಳಗಂಜಿ ಇರುತ್ತದೆ. ನಂತರ ಪಕ್ಕದಲ್ಲೇ ಇದ್ದ 20 ಲೀಟರ ಸಾಮರ್ಥ್ಯದ ಕಪ್ಪು ಲೀಟರ್ ನ ಬಕೆಟ್ ನ 15 ಲೀಟರ್ ನಷ್ಟು ಬೆಲ್ಲದ ಪುಳಗಂಜಿ ಇರುತ್ತದೆ. ಹಾಗೂ ಪಕ್ಕದಲ್ಲೇ ಕಳ್ಳಬಟ್ಟಿ ತಯಾರಿಸಲು ಪರಿಕರಗಳು ಇರುತ್ತದೆ. 10 ಲೀಟರ್ ಸಾಮಾರ್ಥ್ಯದ ಅಲ್ಯುಮಿನಿಯಂ ಪಾತ್ರೆ, 3 ಲೀಟರ್ ಸಾಮರ್ಥ್ಯದ ಸ್ಟೀಲ್ ಪಾತ್ರೆ, ಅರ್ಧ ಲೀಟರ್ ಸಾಮರ್ಥ್ಯ ದ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಡಬ್ಬಿ ಇರುತ್ತದೆ. ಯಾವ ಉದ್ದೇಶಕ್ಕಾಗಿ ಈ ಪುಳಗಂಜಿ ಮತ್ತು ಪರಿಕರಗಳು ಇರುತತದೆ ಎಂದರೆ ಅವರು ಕಳ್ಳಬಟ್ಟಿ ತಯಾರಿಸುವ ಸಲುವಾಗಿ ಎಂದು ತಿಳಿಸಿರುತ್ತಾರೆ. ಅಲ್ಲಿದ್ದ ಎರಡು ಬಿಂದಿಗೆ ಹಾಗೂ ಬಕೆಟ್ ಗಳಲ್ಲಿದ್ದ ಪುಳಗಂಜಿಯನ್ನು 180 ಮಿಲಿಯ 3 ಬಾಟಲ್ ನಲ್ಲಿ ಪುಳಗಂಜಿಯನ್ನು ರಸಾಯನಿಕ ವಿಶ್ಲೇಷಣೆಗಾಗಿ ತೆಗೆಯಲಾಗಿ, ನಂತರ ಸೀಸೆಗಳನ್ನು ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ, ಇಲಾಖಾ ಮೊಹರಿಂದ ಪಂಚರ ಸಮಕ್ಷಮದಲ್ಲಿ ಸೀಲು ಮಾಡಲಾಯಿತು, ನಂತರ ಮಾದರಿ ಮೊಹರುಗಳನ್ನು ಮತ್ತು ಮಾದರಿ ಚೀಟಿಗಳನ್ನು ತಯಾರಿಸಿಕೊಂಡು ಪಂಚರ ಸಹಿಯನ್ನು ಪಡೆದು, ಎಲ್ಲಾ ಪರಿಕರಗಳನ್ನು ಎಲ್ಲಾ ಮಾದರಿಗಾಗಿ ತೆಗೆದ ಬಾಟಲುಗಳ ಮೇಲೆ ಅಂಟಿಸಲಾಗಿರುತ್ತದೆ.

3. ನಂತರ ಉಳಿದ ಬೆಲ್ಲದ ಪುಳಗಂಜಿಯನ್ನು ಮೊಬೈಲ್ ಮೂಲಕ ಮೇಲಾಧಿಕಾರಿಗಳಿಗೆ ತಿಳಿಸಿ, ಸಾಗಿಸಲು ಅನಾನುಕೂಲವಾದ ಕಾರಣ ಬೆಲ್ಲದ ಪುಳಗಂಜಿಯನ್ನು ವಿಡಿಯೋ ಚಿತ್ರೀಕರಣ ಮಾಡಿ ಸ್ಥಳದಲ್ಲಿಯೇ ನಾಶಪಡಿಸಲಾಯಿತು. ಸ್ಥಳದಲ್ಲಿ ಜಿ.ಪಿ ಎಸ್ ಮೂಲಕ ಛಾಯಚಿತ್ರಗಳನ್ನು ತೆಗೆದಿರುತ್ತೇವೆ, ಮಹಜರನ್ನು 8.10 ರಿಂದ 9.15 ರವರೆಗೆ ಬೆಳಗ್ಗೆ ಮಾಡಲಾಗಿರುತ್ತದೆ. ನಂತರ ಆರೋಪಿಯಿಂದ ಆಧಾರ ಕಾರ್ಡ್ ಅನ್ನು ಪಡೆದು, ಹೆಸರು ಮತ್ತು ವಿಳಾಸನ್ನು ಪಡೆದು ಆರೋಪಿಯ ವಿರುದ್ದ ಪ್ರಕರಣವನ್ನು ದಾಖಲಿಸಲಾಯಿತು. ಪರಿಕರಗಳನ್ನು ಇಲಾಖಾ ವಶಕ್ಕೆ ಪಡೆದುಕೊಳ್ಳಲಾಯಿತು.

4. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ), ಪ್ರ.ವ.ವರದಿಯನ್ನು ನಿಪಿ-2 ಎಂದು, ಸಮುಚಿತ ವಾರೆಂಟರ್ ಅನ್ನು ನಿಪಿ-3 ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಮಹಜರನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಲಿಸ್ಟ ಆಫ್ ಆರ್ಟಿಕಲ್ಸ್ ನಿಪಿ 5, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು , ಮಾದರಿ ಮೊಹರನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು, ಚಲನಾ ವಲನ

ಪುಸ್ತಕ ನಿಪಿ 7 ಎಂದು, ಫೋಟೊಗಳನ್ನು ನಿಪಿ-8 ರಿಂದ 10 ಎಂದು, ಮತ್ತು ಧೃಡೀಕರಣ ಪತ್ರವನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ಸಿಡಿಯನ್ನು ನಿಪಿ-12 ಎಂದು, ನ್ಯಾಯಾಲಯದ ಮುಂದೆ ಇರುವ 3 ಬೆಲ್ಲದ ಪುಳಗಂಜಿ ಇರುವ ಮಾದರಿತೆಗೆದಂತಹ ಬಾಟಲುಗಳನ್ನು ಮುಮಾ 1 ರಿಂದ 3 ಎಂದು ಗುರುತಿಸಲಾಯಿತು.

ಅಮಾನತ್ತುಪಡಿಸಿಕೊಂಡ ಬೆಲ್ಲದ ಪುಳಗಂಜಿ ಮತ್ತು ಇತರೆ ಪರಿಕರಗಳನ್ನು ಮತ್ತು ದಾಖಲೆಗಳನ್ನು ಮುಂದಿನ ತನಿಖೆಗಾಗಿ ಚಾಸಾ-8 ರವರಿಗೆ ವಹಿಸಿಕೊಡಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲುಃ ಶ್ರೀ ಕೆ. ಎಸ್ ಪಿ ವಕೀಲರಿಂದ:

ನಾನು ಆರೋಪಿ ಮನೆಗೆ ಕೊಡಲಿಪೇಟೆ ರಸ್ತೆಯ ಬಳಿಯಿಂದ ಹೋಗಿರತ್ತೇನೆ. ಚಾಸಾ 5 ರವರ ಮನೆಯನ್ನು ದಾಟಿ ಆರೋಪಿಯ ಮನೆಗೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ದೂರನ್ನು ನಾನು 7.30 ಸಮಯದಲ್ಲಿ ಸ್ವೀಕರಿಸಿರುತ್ತೇನೆ. ದೂರನ್ನು ಪಡೆದುಕೊಂಡಾಗ ನಾನು ಸೀಲನ್ನು ಹಾಕಿರುವುದಿಲ್ಲ, ಮಾದರಿ ಮೊಹರನ್ನು ಸ್ಥಳದಲ್ಲಿ ತಯಾರು ಮಾಡಿರುತ್ತೇನೆ. ಮಾದರಿ ಮೊಹರಲ್ಲಿ ಕ್ರೈಮ್ ನಂಬರ್ ಹಾಕಿರುತ್ತೇವೆ. ಕ್ರೈಮ್ ನಂಬರ್ ನ್ನು ನಾನು ಠಾಣೆಯಲ್ಲಿ ಕೊಡುತ್ತೇನೆ. ಮಹಜರ್ ನಲ್ಲಿ ಕ್ರೈಮ್ ನಂಬರ್ ಬರೆದಿರುವುದಿಲ್ಲ. ಮಹಜರನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗಳ ಮನೆಯ ಪಕ್ಕದಲ್ಲಿ ಸುಮಾರು ಮನೆಗಳಿವೆ ಎಂದರೆ ಸರಿ. ಚಾಸಾ 2 ರವರನ್ನು ನಾವೇ ಕರೆದುಕೊಂಡು ಬಂದಿರುತ್ತೇವೆ. ಘಟನಾ ಸ್ಥಳದಲ್ಲಿ ಆರೋಪಿಯ ಎಷ್ಟು ಜನರಿಗೆ ಮಾರಾಟ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 9 ರಲ್ಲಿ ಯಾವುದೇ ಚೀಟಿ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಈ ಸಮಯದಲ್ಲಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 9 ರಲ್ಲಿ ನೆರಗಳಳೆ ಎಂದು ಊರಿನ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಮಹಜರ್ ನಲ್ಲಿ ಆರೋಪಿಯ ಮನೆಯ ನಂಬರ್ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಆರೋಪಿ ಕಡೆಯಿಂದ ಯಾವುದೇ ಮುದ್ದೆ ಮಾಲನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 5 ರವರಿಂದ ಸುಳ್ಳು ದೂರನ್ನು ಪಡೆದಿರುತ್ತೆಲನೆ ಎಂದರೆ ಸರಿಯಲ್ಲ. ಫೋಟೋ ಮತ್ತು ಸಿಡಿಯನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ